ತಾಲೂಕು ಸಮ್ಮೇಳನ ----------

# ಮಹಿಳೆ: ಮಾನವತೆಯ ಶಿಲ್ಪಿ

**2013 ಡಿಸೆಂಬರ್ 15 ರಿಂದ 31**

## ಭಾಷಣಗಳ ವಿಷಯಾನುಕ್ರಮಣಿಕೆ

### ★ಕುರ್‌ಆನ್ ಉದ್ಬೋಧೆ – ಸೂರಃ ಅತ್ತಹ್ರೀಮ್, ಸೂಕ್ತ 11,12★

- ಮಹಿಳೆಯ ಸ್ವಂತ ವಿಶ್ವಾಸ ಮತ್ತು ಸತ್ಕರ್ಮಗಳು ಮಾತ್ರ ಅಲ್ಲಾಹನ ಸಮ್ಮುಖದಲ್ಲಿ ಪ್ರಯೋಜನಕಾರಿ ವಿಷಯಗಳೆಂದು ಈ ಸೂಕ್ತಗಳಲ್ಲಿ ಸೂಚಿಸಲಾಗಿದೆ.
- ಕೇವಲ ಸತ್ಕರ್ಮ ಮಾತ್ರ ಪ್ರಯೋಜನಕಾರಿಯಾಗಬಲ್ಲುದು, ಹಿರಿಯರೊಂದಿಗಿನ ಸಂಬಂಧವಲ್ಲವೆಂದು ನೂಹ್ ಮತ್ತು ಲೂತ್‌ರ ಪತ್ನಿಯಂದಿರ ಕಾರ್ಯವಿಧಾನದ ಮೂಲಕ ಸ್ಪಷ್ಟಪಡಿಸಲಾಗಿದೆ.
- ಅತ್ಯಂತ ಕೆಟ್ಟ ಪರಿಸರದಲ್ಲಿಯೂ ತನ್ನ ವಿಶ್ವಾಸವನ್ನು ಹೇಗೆ ರಕ್ಷಿಸಬಹುದೆಂದು ಫಿರ್‌ಔನನ ಪತ್ನಿಯ ಉದಾಹರಣೆಯಿಂದ ತಿಳಿಸಲಾಗಿದೆ.
- ಒಳಿತು ಕೆಡುಕುಗಳೆರಡಕ್ಕೂ ಮಹಿಳೆಯರ ಉದಾಹರಣೆಗಳ ಮೂಲಕ ಮಹಿಳೆಯೇ ಎಲ್ಲಾ ಕೆಡುಕುಗಳ ಮೂಲ ಕಾರಣವೆಂಬ ತಪ್ಪುಕಲ್ಪನೆಯನ್ನು ನೀಗಿಸಲಾಗಿದೆ.
- ತನ್ನ ಸೃಷ್ಟಿಯ ದೃಷ್ಟಿಯಿಂದ ಮಹಿಳೆಯೂ ಒಳಿತು ಮತ್ತು ಕೆಡುಕುಗಳೆರಡರ ಅರ್ಹತೆಯುಳ್ಳವಳು. ತನ್ನ ಅಧಿಕಾರ ಮತ್ತು ಸಂಕಲ್ಪವನ್ನು ಸದುಪಯೋಗ ಪಡಿಸದಿದ್ದರೆ ಅತ್ಯುತ್ತಮ ಪತಿಯ ಅತೀ ಕೆಟ್ಟ ಸಂಗಾತಿಯಾಗಬಹುದು. ಒಂದು ವೇಳೆ ಸತ್ಯ ವಿಶ್ವಾಸದ ರುಚಿ ಸವಿದವಳಾದರೆ ಅತ್ಯಂತ ಕೆಟ್ಟ ಪರಿಸರದಲ್ಲೂ ಸ್ವರ್ಗದ ಹೂರ್ ಮತ್ತು ಉನ್ನತ ದರ್ಜೆಗಳಿಗೆ ಹಕ್ಕುದಾರಳಾಗಬಹುದು.

### ★ಪ್ರಾಸ್ತಾವಿಕ ಭಾಷಣ★

- ಸ್ತುತಿ ಸ್ತೋತ್ರಗಳು, ಸಮ್ಮೇಳನ ಆಯೋಜಿಸಲ್ಪಡುತ್ತಿರುವುದಕ್ಕೆ ಅಲ್ಲಾಹನಿಗೆ ಕೃತಜ್ಞತೆ
- ಅತಿಥಿಗಳ ಪರಿಚಯ
- ಸಭಿಕರಿಗೆ ಸ್ವಾಗತ
- ಎಲ್ಲಕಾರ್ಯಕ್ರಮಗಳ ಸಂಕ್ಷಿಪ್ತ ಪರಿಚಯ
- ಸಮ್ಮೇಳನದಲ್ಲಿ ಗಮನದಲ್ಲಿರಿಸಬೇಕಾದ ವಿಷಯಗಳ ಬಗ್ಗೆ ಮಾರ್ಗದರ್ಶನ
- ದುವಾ

### ★ಭಾಷಣ– ಮದುವೆ ಮತ್ತಿತರ ಸಮಾರಂಭಗಳ ಇಸ್ಲಾಮೀ ನೀತಿ ನಿಯಮಗಳು★

- ಇಸ್ಲಾಮಿನಲ್ಲಿ ದಾಂಪತ್ಯ ಜೀವನ ಮಹತ್ವ.
- ಮದುವೆಯ ಸ್ವಾಭಾವಿಕ ಅಗತ್ಯ, ಪುರುಷರ:– ಕಾರ್ಯಕ್ಷೇತ್ರ, ಆರ್ಥಿಕತೆ, ಮೇಲ್ವಿಚಾರಣೆ, ಸಮಾಲೋಚನೆ, ಅಂತಿಮ ತೀರ್ಮಾನ. ಮಹಿಳೆಯ:– ಕಾರ್ಯಕ್ಷೇತ್ರ, ಸುಶೀಲತೆ, ಅನುಸರಣಾಶೀಲತೆ, ಮನೆಯ ಹೊಣೆಗಾರಿಕೆಗಳು.
- ಮದುವೆ ಮತ್ತಿತರ ಸಮಾರಂಭಗಳಲ್ಲಿ ಆಗುವ ದುಂದುವೆಚ್ಚದ ಮತ್ತು ಇಸ್ಲಾಮೇತರ ಆಚರಣೆಗಳ ಕೆಡುಕುಗಳು ಮತ್ತು ಅದರಿಂದಾಗುವ ಲೌಕಿಕ ಮತ್ತು ಪಾರಲೌಕಿಕ ನಷ್ಟಗಳ ವಿವರಣೆ.
- ಸಮಾರಂಭಗಳ ಇಸ್ಲಾಮೀಕರಣ– ಮದುವೆಗಾಗಿ ವಧೂ–ವರರ ಆಯ್ಕೆಯ ಮಾನದಂಡ, ಮಹರ್ ಪಾವತಿ, ಸರಳತೆ, ದುಂದು ವೆಚ್ಚ ಮತ್ತು ತೋರಿಕೆಗಳಿಂದ ಮುಕ್ತರಾಗಿರುವುದು, ಈ ಎಲ್ಲಾ ವಿಷಯಗಳ ಬಗ್ಗೆ ಕುರಾನ್ ಸೂಕ್ತ ಮತ್ತು ಹದೀಸ್, ಸಂಕ್ಷಿಪ್ತ ಘಟನೆಗಳು, ಉದಾಹರಣೆ ಮತ್ತು ಪ್ರಾಯೋಗಿಕ ಮಾರ್ಗೋಪಾಯಗಳನ್ನು ಸೂಚಿಸುವುದು.

## ★ಭಾಷಣ–ಆಧುನಿಕಕಾಲದ ಮಹಿಳಾ ಸಮಸ್ಯೆಗಳು ಮತ್ತು ಪರಿಹಾರ★

- ಆಧುನಿಕ ಕಾಲದ ಬಾಹ್ಯ ಶೃಂಗಾರದಿಂದ ಮಹಿಳೆಯರು ಪ್ರಭಾವಿತರಾಗುವುದು.
- ಮಹಿಳೆಯರಿಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಪ್ರಸ್ತಾವನೆ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯರೊಂದಿಗೆ ನಡೆಯುತ್ತಿರುವ ಅಕ್ರಮ, ದೌರ್ಜನ್ಯ, ಸಂಶಯ ಪ್ರವೃತ್ತಿ, ಆಕ್ಷೇಪಗಳ ಸಂಕ್ಷಿಪ್ತ ವಿವರಣೆ
- ಮಹಿಳೆಯರ ಹಕ್ಕುಗಳ ಹರಣ, ಬಡತನ, ಬಾಲ್ಯಕಾರ್ಮಿಕತೆ, ಗ್ರಾಮಾಂತರ ಮಹಿಳೆಯರ ಆರೋಗ್ಯ ಮತ್ತು ಶಿಕ್ಷಣದ ಸಮಸ್ಯೆಗಳು ಇತ್ಯಾದಿಗಳಂತಹ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸಿ, ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯ ಬೆಳಕಿನಲ್ಲಿ ಅವುಗಳ ಪರಿಹಾರ, ಪ್ರಾಯೋಗಿಕ ಮಾರ್ಗೋಪಾಯಗಳು.

## ★ಭಾಷಣ – ಪರಿಸ್ಥಿತಿಯ ಸುಧಾರಣೆಯಲ್ಲಿ ಮಹಿಳೆಯರ ಪಾತ್ರ★

- ರಾಷ್ಟ್ರೀಯ ಮತ್ತು ಜಾಗತಿಕ ಸ್ಥಿತಿಗತಿಗಳು – ಒಂದು ಅವಲೋಕನ – ಭೌತಿಕತೆಗಾಗಿ ಪರಿಶ್ರಮ, ನೈತಿಕ ಅಧಃಪತನ, ಇಸ್ಲಾಮ್ ವಿರೋಧಿ ಅಲೆ
  - ಭೌತಿಕತೆಗಾಗಿ ಪರಿಶ್ರಮ– ಮಹಿಳೆಯರ 2 ಪಾತ್ರಗಳು –1– ಆರ್ಥಿಕತೆಯ ಸೃಷ್ಟಿಯಲ್ಲಿ ಅಗತ್ಯಾನುಸಾರ ಪಾಲ್ಗೊಳ್ಳಬಹುದು. 2– ಸಂತೃಪ್ತ ಮನೋಭಾವವನ್ನು ಬೆಳೆಸಿಕೊಳ್ಳುವುದು.
  - ನೈತಿಕ ಅಧಃಪತನ– ಮಹಿಳೆ ಇದರ ಕೈ ಗೊಂಬೆಯಾಗದಿರುವುದು, ನವ ಪೀಳಿಗೆಯ ತರಬೇತಿ ಮಾಡುವುದು
  - ಇಸ್ಲಾಮ್ ವಿರೋಧಿ ಅಲೆ– ಯುದ್ಧಗಳಲ್ಲಿ ಮಹಿಳಾ ಸಹಾಬಿಗಳ ಪಾತ್ರ–ಆರೈಕೆ, ಪ್ರೇರಣೆ. ಇಖ್ವಾನೀ ಮಹಿಳೆಯರ ಪಾತ್ರ–ಮನೆಯ ಆಂದೋಲನೀಕರಣ, ಪ್ರಸಕ್ತ ಹೋರಾಟದಲ್ಲಿ ಅವರಿಂದ ಆಹಾರ ಪೂರೈಕೆಯ ವ್ಯವಸ್ಥೆ, ಆರೈಕೆ. ಕ್ರಿಯಾಶೀಲತೆ (Activism)ಯ ಉತ್ತಮ ಮಾದರಿಗಳು–ಅಸ್ಮಾ ಬೆಳ್ತಜೀ, ಅಸ್ಮಾ ಸಈದ್, ಡಾ। ಅಝ್ರ ಬತೂಲ್, ಝೈನಬ್ ಗಝ್ಝಾಲಿ, ಅರುಂಧತಿ ರಾಯ್.
- ಮಾಡಬೇಕಾದ ಕೆಲಸ –ವಿಚಾರಗಳನ್ನು ರೂಪಿಸುವುದು, ವಾತಾವರಣದ ಸೃಷ್ಟಿ, ಕಾನೂನು ರೂಪಿಸುವುದು.
  - ವಿಚಾರಗಳನ್ನು ರೂಪಿಸುವುದು – ಸಮಾವೇಶಗಳು, ಭಾಷಣಗಳು, Whatsapp, google, youtubeಗಳ ಉಪಯೋಗ.
  - ವಾತಾವರಣದ ಸೃಷ್ಟಿ, – ಕಾಲೇಜು, ಉದ್ಯೋಗ ನಿರ್ವಹಿಸುವ ಸ್ಥಳಗಳಲ್ಲಿ ಪೂರಕ ವಾತಾವರಣ ಸೃಷ್ಟಿಸುವುದು.
  - ಕಾನೂನು ರೂಪಿಸುವುದು – ದಿನಪತ್ರಿಕೆ, ಮ್ಯಾಗಝಿನ್‌ಗಳಲ್ಲಿ ಲೇಖನ ಬರೆಯುವುದು, ಸರಕಾರಿ ಆಯೋಗಗಳಲ್ಲಿ ಪ್ರಾತಿನಿಧ್ಯಕ್ಕಾಗಿ ಪ್ರಯತ್ನ.

## ★ಸಮಾರೋಪ ಭಾಷಣ★

- ಸ್ತುತಿ ಸ್ತೋತ್ರಗಳು, ಸಮ್ಮೇಳನ ಆಯೋಜಿಸಲ್ಪಡುತ್ತಿರುವುದಕ್ಕೆ ಅಲ್ಲಾಹನಿಗೆ ಕೃತಜ್ಞತೆ.
- ಸಭಿಕರಿಗಾಗಿ ದುವಾ (ಅವರ ಭಾಗವಹಿಸುವಿಕೆ ಮತ್ತು ಶಿಸ್ತು ಪಾಲನೆ ಇತ್ಯಾದಿಗಳಿಗಾಗಿ)
- ಸಮ್ಮೇಳನದ ಧ್ಯೇಯೋದ್ದೇಶಗಳು.
- ಕೇಂದ್ರೀಯ ವಿಷಯ **"ಮಹಿಳೆ ಮಾನವತೆಯಶಿಲ್ಪಿ"**ಯ ವಿವರಣೆ.
- ಇಸ್ಲಾಮಿನ ನೆರಳಿನಲ್ಲಿ ಮಾತ್ರ ಮಹಿಳೆಯಕ್ರಾಂತಿಕಾರಿ ವ್ಯಕ್ತಿತ್ವದ ವಿಕಸನ ಸಾಧ್ಯವೆಂಬುದರ ದೃಢವಾದ ಪ್ರತಿಪಾದನೆ.
- ಮಹಿಳೆತನ್ನ ಸಕಾರಾತ್ಮಕ ಪಾತ್ರದಿಂದ ಕುಟುಂಬವನ್ನು ಶೃಂಗರಿಸಬಲ್ಲಳು, ಸಮಾಜದ ಸುಧಾರಣೆ ಮಾಡಬಲ್ಲಳು ಮತ್ತು ಪಥಭ್ರಷ್ಟ, ಬಳಲಿ ನರಳುತ್ತಿರುವ ಮಾನವತೆಯ ನಿರ್ಮಾಣ ಮಾಡಬಲ್ಲಳು.
- ಜಮಾಅತಿನ ಪರಿಚಯ– ಪ್ರತಿಜ್ಞಾಪತ್ರದ ಪಾಲನೆಯ ಮಹತ್ವ, ಸಹಕಾರಕ್ಕಾಗಿ ಕೃತಜ್ಞತೆ–ದುವಾ.